ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 171
ಸದಸ್ಯರ ಹೆಸರು : ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
ಉತ್ತರಿಸುವ ದಿನಾಂಕ : 01-02-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಅರಣ್ಯ ಹಕ್ಕು ಕಾಯ್ದೆಯಡಿ ಬುಡಕಟ್ಟು ಸಮುದಾಯದ ಜಮೀನು ಮಂಜೂರಾತಿಗೆ ಸಲ್ಲಿಸಿದ ಒಟ್ಟು ಅರ್ಜಿಗಳು ಹಾಗೂ ಮಂಜೂರಾದ ಅರ್ಜಿಗಳು ಎಷ್ಟು;</td><td>ಅರಣ್ಯ ಹಕ್ಕು ಕಾಯ್ದೆಯಡಿ ಮಂಜೂರು ಮಾಡಿದ ಅರ್ಜಿಗಳ ವಿವರ.
<table>
<tr><th>ಕ್ಲೇಮುದಾರರ ವಿವರ</th><th>ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ</th><th>ವಿತರಿಸಿರುವ ಹಕ್ಕು ಪತ್ರಗಳ ಸಂಖ್ಯೆ</th><th>ಮಂಜೂರು ಮಾಡಿರುವ ಭೂಮಿ ವಿವರ (ಎಕರೆಗಳಲ್ಲಿ)</th><th>ತಿರಸ್ಕೃತಗೊಂಡಿರುವ ಅರ್ಜಿಗಳ ಸಂಖ್ಯೆ</th><th>ಇತ್ಯರ್ಥವಾಗದೆ ಬಾಕಿ ಇರುವ ಅರ್ಜಿಗಳ ಸಂಖ್ಯೆ</th></tr>
<tr><td>ಪರಿಶಿಷ್ಟ ಪಂಗಡ</td><td>48418</td><td>12371</td><td>17171.91</td><td>32335</td><td>3712</td></tr>
<tr><td>ಇತರೆ ಪಾರಂಪರಿಕ ಅರಣ್ಯ ವಾಸಿಗಳು</td><td>240673</td><td>1972</td><td>2095.28</td><td>145767</td><td>92934</td></tr>
<tr><td>ಸಮುದಾಯ ಹಕ್ಕುಗಳು</td><td>5936</td><td>1352</td><td>36347.14</td><td>3146</td><td>1438</td></tr>
<tr><td>ಒಟ್ಟು</td><td>295027</td><td>15695</td><td>55614.33</td><td>181248</td><td>98084</td></tr>
</table></td></tr>
<tr><td>ಆ)</td><td>ಬಾಕಿ ಉಳಿದಿರುವ ಅರ್ಜಿಗಳು ಮಂಜೂರಾಗದೆ ಇರಲು ಕಾರಣ ಹಾಗೂ ಇದನ್ನು ಪೂರ್ಣಗೊಳಿಸಲು ಬೇಕಾಗುವ ಸಮಯ ಎಷ್ಟು:</td><td>ಅರಣ್ಯ ಹಕ್ಕು ಕಾಯ್ದೆಯಡಿ 3 ಸಮಿತಿಗಳನ್ನು ಕೆಳಕಂಡಂತೆ ರಚಿಸಲಾಗಿದೆ.
1. ಅರಣ್ಯ ಹಕ್ಕು ಸಮಿತಿ (ಗ್ರಾಮಪಂಚಾಯತಿ)
2. ಉಪ-ವಿಭಾಗೀಯ ಮಟ್ಟದ ಸಮಿತಿ
3. ಜಿಲ್ಲಾ ಮಟ್ಟದ ಸಮಿತಿ
ಸದರಿ ಸಮಿತಿಗಳು ಅರಣ್ಯ ಹಕ್ಕು ಅಧಿನಿಯಮದಡಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ.

ಅರ್ಜಿಗಳು ಮಂಜೂರಾಗದಿರಲು ಪ್ರಮುಖ ಕಾರಣಗಳು ಕೆಳಕಂಡಂತಿದೆ:-
1. ಕ್ಲೇಮುದಾರರು ಕಂದಾಯ ಭೂಮಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.
2. ಇತರೆ ಪಾರಂಪರಿಕ ಅರಣ್ಯ ವಾಸಿಗಳು 75 ವರ್ಷಗಳಿಂದ ಅರಣ್ಯ ಭೂಮಿಯನ್ನು ಅವಲಂಭಿಸಿರುವುದಕ್ಕೆ ಅಗತ್ಯ ದಾಖಲೆಗಳನ್ನು ಒದಗಿಸಲು ವಿಫಲರಾಗಿರುತ್ತಾರೆ.</td></tr>
</table>

		3. ಒಂದೇ ಕುಟುಂಬದಲ್ಲಿ ಬಹುಮಂದಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. 4. ಅರ್ಜಿದಾರರಲ್ಲಿ ಈಗಾಗಲೇ ಕೆಲವರು ಅರಣ್ಯ ಇಲಾಖಾ ವತಿಯಿಂದ ಸೌಲಭ್ಯಗಳನ್ನು ಪಡೆದು ಅರಣ್ಯದಿಂದ ತೆರವುಗೊಂಡು ಪುನರ್ ವಸತಿ ಪಡೆದಿರುತ್ತಾರೆ. 5. ಅರ್ಜಿ ಸಲ್ಲಿಸಿರುವ ಜಮೀನು ಕಂದಾಯ ಇಲಾಖೆಗೆ ಅಥವಾ ಅರಣ್ಯ ಇಲಾಖೆ ಸೇರಿದೆ ಎಂಬುದುರ ವಿವಾದಗಳು ತೀರ್ಮಾನವಾಗಬೇಕಾಗಿರುತ್ತದೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಬಾಕಿ ಇರುವ ಹಾಗೂ ತಿರಸ್ಕೃತ ಅರ್ಜಿಗಳ ಪುನರ್ ಪರಿಶೀಲನೆ ಕಾರ್ಯವನ್ನು ದಿನಾಂಕ:15.12.2020 ರೊಳಗಾಗಿ ಪೂರ್ಣಗೊಳಿಸಲು ಸೂಚಿಸಲಾಗಿರುತ್ತದೆ.
ಇ)	ಹೊಸದಾಗಿ ಅರ್ಜಿ ಸಲ್ಲಿಸಲು ಇರುವ ಕಾಲಾವಕಾಶ ಎಷ್ಟು?	ನಿಯಮಾನುಸಾರ ಸಕ್ಷಮ ಸಮಿತಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಯಾವುದೇ ಕಾಲಮಿತಿ ನಿಗಧಿಪಡಿಸಿರುವುದಿಲ್ಲ.

ಸಕಇ 29 ಎಸ್‌ಟಿಪಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು